

ಬಿಸಿಲು
ಬೆಳದಿಂಗಳು
ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕಾವ್ಯಗಳಲ್ಲಿ ಕಲ್ಪನೆಗಳ ಅತಿರೇಕ!

ಮಹಾಪುರುಷರ ಜೀವನವನ್ನು ಉದಾತ್ತೀಕರಿಸುವಲ್ಲಿ ಕವಿಗಳು ತಮ್ಮ ಕಾವ್ಯರಚನೆಯಲ್ಲಿ ಅನೇಕ ಅಸಹಜ ಕಲ್ಪನೆಗಳನ್ನು ಮಾಡಿಕೊಂಡಿದ್ದಾರೆ. ಅವುಗಳಿಗೆ ಉದಾಹರಣೆಯಾಗಿ ಎರಡನ್ನು ಇಲ್ಲಿ ನೋಡಬಹುದು: ಹರಿಹರನ ಅಕ್ಕಮಹಾದೇವಿ ರಗಳೆಯ ಆರನೆಯ ಸ್ಥಲದ ಕೊನೆಯಲ್ಲಿ ಬರುವ ಸನ್ನಿವೇಶ ಹೀಗಿದೆ. ಕೌಶಿಕ ಮಹಾರಾಜ ಮತ್ತು ಅಕ್ಕ ಅರಮನೆಯ ಶಯ್ಯಾಗೃಹದಲ್ಲಿರುವಾಗ, ಅಕ್ಕನ ಆರಾಧ್ಯದೇವರಾದ ಗುರುಗಳು ಶಿಷ್ಯಸಮೂಹದೊಂದಿಗೆ ನೇರವಾಗಿ ಶಯ್ಯಾಗೃಹದೊಳಕ್ಕೆ 'ಢೋಂಕನೆ' ಬಂದುಬಿಡುತ್ತಾರೆ. ಆಗ ಅಕ್ಕಮಹಾದೇವಿಯು ಗುರುಭಕ್ತಿಯ ಆವೇಶದಲ್ಲಿ ಮೈಮರೆತು, ತನ್ನ ಶರೀರದ ಮೇಲೆ ಬಟ್ಟೆ ಇಲ್ಲವೆಂಬುದರ ಪರಿವೆಯೂ ಇಲ್ಲದೆ, ಮಂಚದಿಂದ ಸರ್ರನೆ ಕೆಳಗಿಳಿದು ಗುರುಗಳ ಪಾದಕ್ಕೆ ಭಕ್ತಿಯಿಂದ ನಮಸ್ಕರಿಸುತ್ತಾಳೆ. ಗುರುಗಳು ಕಣ್ಮುಚ್ಚಿ "ಮಗಳೆ, ಮಗಳೆ ದುಕೂಲಮಂ ಬಾಸಣಿಸಿಕೊಳ್" ಎಂದು ಮೈಮೇಲೆ ಬಟ್ಟೆಯನ್ನು ಹಾಕಿಕೊಳುವಂತೆ ವಾತ್ಸಲ್ಯಭಾವದಿಂದ ಎಚ್ಚರಿಸುತ್ತಾರೆ. ಲೌಕಿಕಭಾವನೆ ಜಾಗೃತಗೊಂಡ ಅಕ್ಕ ನಾಚಿಕೆಯಿಂದ ತಗ್ಗಿ, ಕುಗ್ಗಿ, ಸಿಗ್ಗಾಗಿ ಮೈಮುಚ್ಚಿಕೊಳ್ಳಲು ಮಂಚದ ಮೇಲಿರುವ ತನ್ನ ಸೀರೆಗಾಗಿ ಕೈಚಾಚುತ್ತಾಳೆ. ಅವಳ ಗುರುಬಕ್ತಿಯನ್ನು ಅರ್ಥಮಾಡಿಕೊಳ್ಳದ ಕೌಶಿಕ "ತೆಗೆ ತೆಗೆ ನಿನಗೇನತ್ಯಂತ ಭಕ್ತಿಗೆ ಮೀರಿದವಳ್ಗೆ ಸೀರೆಯೇಕೆಂದು" ಕೊಂಕು ನುಡಿಯುತ್ತಾ ಕೈಯ ಸೀರೆಯನ್ನು ತನ್ನೆಡೆಗೆ ಸೆಳೆದುಕೊಳುತ್ತಾನೆ. ಗುರುಸೇವೆಗೆ ಅಡ್ಡಿಬರಬಾರದೆಂದು ಮದುವೆ ಸಂದರ್ಭದಲ್ಲಿ ಆಕೆ ವಿಧಿಸಿದ್ದ ಷರತ್ತಿಗೆ ಅನುಗುಣವಾಗಿ ಕೌಶಿಕ ನಡೆದುಕೊಳ್ಳದ ಕಾರಣ "ಬದುಕಿದೆ, ಬದುಕಿದೆ" ಎಂದು ಪರಮವೈರಾಗ್ಯವನ್ನು ತಳೆದ ಅಕ್ಕ ದಿಗಂಬರೆಯಾಗಿ ಅರಮನೆಯಿಂದ ಹೊರನಡೆಯುತ್ತಾಳೆ. ಇದೆಲ್ಲಾ ಕೌಶಿಕನ ಕಣ್ಣೆದುರಿಗೇ ನಡೆಯುತ್ತದೆ.

ಇದೆಂತಹ ವಿಚಿತ್ರ ಕಲ್ಪನೆ ಹರಿಹರನದು? "ಎನ್ನಿಚ್ಛೆಯಿಂ ಗುರುವಿನಂಘ್ರಿಸೇವೆಯೊಳಿಪ್ಪೆ" ಎಂಬ ಷರತ್ತಿಗನುಗುಣವಾಗಿ ಅಕ್ಕ ಎಂತಹ ಗುರುಭಕ್ತಿಪರಾಯಣೆಯಾಗಿದ್ದಳೆಂಬುದನ್ನು ಚಿತ್ರಿಸುವುದು ಹರಿಹರನ ಮೂಲ ಉದ್ದೇಶವಿರಬಹುದು. ಕೌಶಿಕ ಮಹಾರಾಜನು ಮದುವೆ ಸಂದರ್ಭದಲ್ಲಿ ಒಪ್ಪಿದ್ದ ಮೂರು ಷರತ್ತುಗಳನ್ನು ಮುರಿಯುವುದನ್ನೇ ಅಕ್ಕ ಹೇಗೆ ಕಾಯುತ್ತಿದ್ದಳು ಎಂದು ವರ್ಣಿಸುವ ಮೂಲಕ ಹರಿಹರ ಅಕ್ಕನ ಜೀವನಕಥಾನಿರೂಪಣೆಯಲ್ಲಿ ಅನೇಕ ಅಸಹಜ ಕಲ್ಪನೆಗಳನ್ನು ಮಾಡಿಕೊಂಡು ಅವಾಂತರವೆಬ್ಬಿಸಿದ್ದಾನೆ. ಗುರುಗಳ ಕಾಲಿಗೆ ಅಕ್ಕ ನಗ್ನಳಾದ ಸ್ಥಿತಿಯಲ್ಲಿಯೇ ನಮಸ್ಕರಿಸುವುದನ್ನು ತಪ್ಪು ಕಲ್ಪಿಸಿ ಹೀಗಳೆವ ಕೌಶಿಕ, ತನ್ನ ಶಯ್ಯಾಗೃಹದೊಳಗೆ ಗುರುಗಳು ಹೇಗೆ ಬಂದರೆಂದು ಚಕಾರ ಶಬ್ದವೆತ್ತುವುದಿಲ್ಲ. ಅಕ್ಕನ ನಡವಳಿಕೆಯು ನಿರ್ಲಜ್ಜೆಯಿಂದ ಕೂಡಿದ್ದೆಂದು ಅನ್ನಿಸುವ ಕೌಶಿಕನ ಲೌಕಿಕ ಪ್ರಜ್ಞೆಗೆ, ಏಕಾಏಕಿ ಅವನ ಶಯ್ಯಾಗೃಹಕ್ಕೆ ನಡೆದು ಬಂದ ಗುರುಗಳ 'ಅಲೌಕಿಕ' ನಡವಳಿಕೆಯ ಬಗ್ಗೆ ಏನೂ ಅನ್ನಿಸದಿರುವುದು ಆಶ್ಚರ್ಯಕರ. ಬೆತ್ತಲೆಯಾಗಿದ್ದ ಅಕ್ಕನಿಗೆ ಬಟ್ಟೆ ಹಾಕಿಕೊಳುವಂತೆ ತಿಳಿ ಹೇಳಿ ಕಣ್ಮುಚ್ಚಿ ಕನಿಕರ ತೋರುವ ಗುರುಗಳು, ದಂಪತಿಗಳು ಮಲಗಿದ್ದ ಶಯ್ಯಾಗೃಹಕ್ಕೆ ಕಾಲಿಟ್ಟ ತಮ್ಮ ತಪ್ಪಿನ ಬಗ್ಗೆ ಸ್ವಲ್ಪವೂ 'ಕನಿಕರ' ಪಟ್ಟುಕೊಳುವುದಿಲ್ಲ. ಆದರೆ ಶಯ್ಯಾಗೃಹಕ್ಕೆ ಏಕಾಏಕಿ ಕಾಲಿಡುವಷ್ಟು ಅಧಮರೇ ಗುರುಗಳು? ಅರಮನೆಯೊಳಗೆ ಹಾಗೆ ಅಡೆತಡೆಯಿಲ್ಲದೆ ಕಾಲಿಡಲು ಯಾರಿಗಾದರೂ ಸಾಧ್ಯವೇ? ಈ ಪ್ರಸಂಗವು ಭಕ್ತಿಯ ಭರಾಟೆಯಲ್ಲಿ ಹರಿಹರ ಮಾಡಿರುವ ಅಸಂಗತ ಕಲ್ಪನೆಗಳ ಅತಿರೇಕವಲ್ಲದೆ ಬೇರೆ ಏನೂ ಅಲ್ಲ.

ಮೇಲಿನಂತೆ ತೀರಾ ಆಕ್ಷೇಪಿಸಲಾಗದಂತಹ ಒಂದು ಪ್ರಸಂಗ ಚಿಕ್ಕರಾಚಯ್ಯನ ಸಾಂಗತ್ಯದ ನಾಲ್ಕನೆಯ ಸಂಧಿಯಲ್ಲಿ ಬರುತ್ತದೆ. ಅಕ್ಕ ಉಡುತಡಿಯನ್ನು ಬಿಟ್ಟು ಬೆತ್ತಲೆಯಾಗಿ ಚನ್ನಮಲ್ಲಿಕಾರ್ಜುನನನ್ನು ಅರಸುತ್ತಾ ಶ್ರೀಗಿರಿಯ ಕಾಡಿನಲ್ಲಿ ಅಲೆದಾಡುತ್ತಾಳೆ. ಶಿವನು ಆಕೆಯ ಭಕ್ತಿಯನ್ನು ಪರೀಕ್ಷಿಸಬೇಕೆಂದು ಹದಿನಾರರ ಹರೆಯದ ಜಂಗಮನ ವೇಷದಲ್ಲಿ ಎದುರಾಗುತ್ತಾನೆ. "ಹೆಣ್ಣಿಗೇತಕೆ ಪುಣ್ಯ ವೈರಾಗ್ಯ, ಲಾವಣ್ಯವ ಗಂಡರಡವಿಯಲಿ ಅಣ್ಣಗಳಾಳದೆ ಬಿಡರು" ಎಂದು ವ್ಯಾಮೋಹಗೊಂಡು ಅವಳನ್ನು ಕೈಹಿಡಿಯಲು ಹೋಗುತ್ತಾನೆ. "ಜಂಗಮವಾದರೆ ನಿನ್ನಂಗಚೇಷ್ಟೆಗಳೇಕೆ? ಕಂಗಳಲ್ಲಿ ಕಾಮವೇತಕೆ? ನಮ್ಮ ಸಂಗಡ ಮಾತೇಕೆ? ಲಿಂಗವಿಕಾರಿ ಹೋಗೆಲವೋ" ಎಂದು ಅಕ್ಕ ಬಿರುನುಡಿಯುತ್ತಾಳೆ. ಕೆಲ ಹೊತ್ತಿನ ನಂತರ ತನ್ನನ್ನು ಕಾಡುತ್ತಿರುವ ಹುಸಿವೇಷದ ಜಂಗಮನು ಶಿವನಲ್ಲದೆ ಬೇರೆ ಯಾರೂ ಅಲ್ಲವೆಂದು ಅಕ್ಕ ಗುರುತಿಸುತ್ತಾಳೆ. ಶಿವನು ತನ್ನ ನಿಜರೂಪವನ್ನು ತೋರಿ 'ನೀರೆ, ಮೆಚ್ಚಿದೆ ನಡೆ ಕೈಲಾಸಕ್ಕೆ' ಎಂದು ಕರೆಯುತ್ತಾನೆ. ಆದರೆ ಅಕ್ಕಮಹಾದೇವಿಯು "ನನಗಿನ್ನೆಲ್ಲಿಯ ಕೈಲಾಸ, ಇದನ್ನೊಪ್ಪೆ" ಎಂದು ನಿರಾಕರಿಸುತ್ತಾಳೆ. ಕಥೆಯು ಇಷ್ಟಕ್ಕೇ ನಿಂತಿದ್ದರೆ ತುಂಬಾ ಅರ್ಥಪೂರ್ಣವಾಗುತ್ತಿತ್ತು. ಆದರೆ ಮುಂದೆ ಶಿವನು ನಸುನಕ್ಕು "ನೀನು ನಿಜವಾಗಿಯೂ ಅಕ್ಕನೇ ಆಗಿರುವೆ, ಕಲ್ಯಾಣವನ್ನು ಹೊಕ್ಕು ನಂತರ ಶ್ರೀಗಿರಿಗೆ ಹೋಗು" ಎಂದು ಆದೇಶವನ್ನಿತ್ತು ಮರೆಯಾಗುತ್ತಾನೆ. ಇದೂ ಸಹ ಅಸಹಜ ಕಲ್ಪನೆಯೇ. "ಹರನೇ ಗಂಡನಾಗಬೇಕೆಂದು ಅನಂತಕಾಲ ತಪಿಸಿದ್ದೆ ನೋಡಾ" ಎಂದು ಅನುದಿನವೂ ಶಿವನಿಗಾಗಿ ಹಂಬಲಿಸಿದ ಅಕ್ಕ, ಅವನ ದರ್ಶನವಾದ ಮೇಲೆಯೂ, ಕೈಲಾಸಕ್ಕೆ ಕರೆದರೂ ಒಪ್ಪದೆ, ಕಲ್ಯಾಣದ ಶಿವಶರಣರನ್ನು ನೋಡಿಬರುವೆನೆಂದು ಹೇಳಿಸಿರುವುದು ಸಮಂಜಸವಾಗಲಾರದು. ಬಹುಶಃ ಶಿವನಿಗಿಂತ ಶಿವನ ಭಕ್ತರೇ ಅಧಿಕರು, ಶಿವನು ತನ್ನನ್ನು ಆರಾಧಿಸುವ ಭಕ್ತರ ಮನದ ಮೂಲೆಯಲ್ಲಿ ಅಡಗಿರುತ್ತಾನೆಂಬುದನ್ನು ಎತ್ತಿತೋರಿಸುವುದು ಕವಿಯ ಉದ್ದೇಶ ಇರಬಹುದು.

ಇವೆಲ್ಲವುಗಳಿಗಿಂತಲೂ ಅಸಹಜವಾದ, ಅತಿರೇಕದ ವಿಕೃತ ಕಲ್ಪನೆ ಹಲಗೆಯಾರ್ಯನ ಶೂನ್ಯಸಂಪಾದನೆಯಲ್ಲಿ ಬರುತ್ತದೆ. ಕಾಮುಕ ಕೌಶಿಕನಿಂದ ಕೊಸರಿಕೊಂಡು ಪೂರ್ಣ ದಿಗಂಬರೆಯಾಗಿ ನೀಳ ಕೇಶರಾಶಿಯೇ ಉಡುಗೆಯಾದ

ಅಕ್ಕಮಹಾದೇವಿಯು ಉಡುತಡಿಯಿಂದ ಹೊರಟು ಬಸವಾದಿ ಶರಣರ ಕೃಪಾಶ್ರಯ ಪಡೆಯಲು ಕಲ್ಯಾಣಕ್ಕೆ ಸಮೀಪಿಸುತ್ತಿದ್ದಂತೆ ಅವಳನ್ನು ಬರಮಾಡಿಕೊಳ್ಳಲು ಕಿನ್ನರಿಬ್ರಹ್ಮಯ್ಯ ಎದುರಾಗುತ್ತಾನೆ. ಅಕ್ಕನ ಕಣ್ಣುಕುಕ್ಕುವ ಸೌಂದರ್ಯರಾಶಿಯನ್ನು ಕಂಡು ವಿಚಲಿತನಾಗುತ್ತಾನೆ. "ಈಕೆ ಲಿಂಗಾನುಭಾವ ಸಂಪನ್ನೆಯಾದರೆ ಗುರು ತಾಯೆಂದು ಶರಣೆಂಬೆನು; ಅಲ್ಲಾ ದೇಹ ಲಜ್ಜಾಭಿಮಾನ ಉಳಿಡೆ ಸ್ತ್ರೀಯಾಗಿ ಕೈವಿಡಿವೆನು" ಎಂದು ಮನದಲ್ಲಿ ನಿಶ್ಚಯಿಸಿಕೊಳುತ್ತಾನೆ. ಅವಳೊಂದಿಗೆ ಶೃಂಗಾರಭಾವದ ಸರಸ ಸಲ್ಲಾಪವನ್ನು ಪ್ರಾರಂಭಿಸುತ್ತಾನೆ.

**ನಿನ್ನ ಸ್ವರೂಪ ಕಂಡೆನ್ನ ದೃಷ್ಟಿ ನಟ್ಟುದೆನಗೆ**
**ನಿನ್ನ ಲಾವಣ್ಯರಸವ ಕಂಡು ಮನ ಹಾರೈಸಿತ್ತೆನಗೆ**
**ಮಹಾಲಿಂಗ ತ್ರಿಪುರಾಂತಕನೆನಗೊಡ್ಡಿದ ಮಾಯೆಯು**
**ನಿನ್ನ ಸಮಸುಖಕೂಟದೊಳಿದ್ದು**
**ಶಿವಭಾವ ಭಕ್ತಿಯಿಂ ಗೆಲುವೆ ಬಾರೌ ಹೆಣ್ಣೇ**

ಅಕ್ಕ ಸ್ವಲ್ಪವೂ ಘಾಸಿಗೊಳದೆ, ಧೃತಿಗೆಡದೆ "ನೋಡುವ ಕಂಗಳಿಗೆ ರೂಪಿಂಬಾಗಿರಲು ನೀವು ಮನ ನಾಚದೆ ಬಂದಿರಣ್ಣಾ, ನಾರಿಯೆಂಬ ರೂಪಿಂಗೆ ನೀವು ಒಲಿದು ಬಂದಿರಣ್ಣಾ, ಬುದ್ಧಿಗೇಡಿತನದಿಂದ ಮನ ಹೇಸದೆ ಬಂದಿರಣ್ಣಾ, ಚೆನ್ನಮಲ್ಲಿಕಾರ್ಜುನನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರ..." ಎಂದು ತಿಳಿಹೇಳಿ ಸಹೋದರ ಭಾವದಿಂದಲೇ "ಎನ್ನಂತೆ ಪುಣ್ಯಗೆಯ್ದವರುಂಟೇ? ಎನ್ನಂತೆ ಭಾಗ್ಯಗೆಯ್ದವರುಂಟೇ? ಕಿನ್ನರನಂತಪ್ಪ ಸೋದರನೆನಗೆ" ಎಂದು ಅವನನ್ನು ಸರಿದಾರಿಗೆ ತರಲು ಯತ್ನಿಸುತ್ತಾಳೆ. ಅದಕ್ಕೂ ತಿದ್ದಿಕೊಳ್ಳದ ಕಿನ್ನರಯ್ಯ "ಬರಿಯ ಮಾತಿನ ಬಣ್ಣಣೆಯ ಪಸರಿಸೆ ನಾನು ಬಿಡುವೆನೆ? ಬಾ..." ಎಂದು ದುಡುಕಿ ಆಕೆಯನ್ನು ಹಿಡಿಯಲು ಮುಂದಾಗುತ್ತಾನೆ. "ನೀನಿಂತು ಮುಂದುಗೆಡುವರೆ ನನ್ನ ತನುವನೊಪ್ಪಿಸಿಹೆನು, ನಿನ್ನ ಮನಕ್ಕೆ ಬಂದಂತೆ ಮಾಡಿಕೊಳ್" ಎಂದು ತನ್ನ ಶರೀರವನ್ನು ಅವನಿಗೆ ಒಪ್ಪಿಸುತ್ತಾಳೆ. ಅವಳಲ್ಲಿ ದೇಹಾಭಿಮಾನವಿದೆಯೇ ಇಲ್ಲವೇ ಎಂದು ಪರೀಕ್ಷಿಸಲು ಆಕೆಯ ಅಂಗಾಂಗಗಳೆಲ್ಲವನ್ನೂ ಕಿನ್ನರಯ್ಯ ಮುಟ್ಟಿ ಮುಟ್ಟಿ ನೋಡುತ್ತಾನೆ. ಅಷ್ಟಕ್ಕೇ ನಿಲ್ಲದೆ "ಯೋನಿಯೊಳಂಗುಲಿಪ್ರವೇಶಮಂ ಮಾಡಲಲ್ಲಿ ಚಿದ್ಭಸ್ಮವೊದಗಲ್" ಆತನು ನಡುನಡುಗಿ ಭೀತಾತುರನಾಗುತ್ತಾನಂತೆ!

'ಕಂಗಳು ತಪ್ಪಿ ನೋಡಿದರೆ ಮಾರಿ' ಎಂದು ನಂಬಿದ, 'ಪರವಧುವನು ಮಹಾದೇವಿ ಎಂಬೆ', 'ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧಮಲ್ಲಿಕಾರ್ಜುನ' ಎಂದು ಗೌರವಿಸಿದ ಶಿವಶರಣರಲ್ಲಿ ಹೆಸರಾದ ಕಿನ್ನರಯ್ಯ ಹೀಗೆ ಅಕ್ಕನೊಂದಿಗೆ ಅಸಭ್ಯ ರೀತಿಯಲ್ಲಿ ವರ್ತಿಸುವಷ್ಟು ಅವಿವೇಕಿಯಾಗಿದ್ದಿರಲಾರ. ಅಕ್ಕನನ್ನು ಅನುಭವ ಮಂಟಪಕ್ಕೆ ಸ್ವಾಗತಿಸಿ ಕರೆದುಕೊಂಡು ಬರಲು ಬಸವಣ್ಣ ಮತ್ತು ಪ್ರಭುದೇವರು ಕಳುಹಿಸಿದ ಆಪ್ತ ವ್ಯಕ್ತಿ ಕಿನ್ನರಯ್ಯನನ್ನು ಹೀಗೆ ತನ್ನ ಲಂಗುಲಗಾಮಿಲ್ಲದ ಕಪೋಲ ಕಲ್ಪನೆಗಳಿಂದ ಅನಾಗರಿಕ ರೀತಿಯಲ್ಲಿ ಹಲಗೆಯಾರ್ಯ ಚಿತ್ರಿಸಿದ್ದಾನೆ. ಇದೇ ರೀತಿ ಕವಿ ಚನ್ನಬಸವಾಂಕನೂ ಸಹ ತನ್ನ ಅಕ್ಕಮಹಾದೇವಿ ಪುರಾಣದಲ್ಲಿ ಕಾಮುಕ ಭಾವನೆಯಿಂದ ಕೆಣಕಲು ಬಂದ ಕಿನ್ನರಯ್ಯನಿಗೆ ಅಕ್ಕನು ತನ್ನ ಗುಹ್ಯದೊಳಗೆ ಕಾಮನನ್ನು ಸುಟ್ಟ ಚಿದ್‌ಭಸ್ಮವನ್ನು ತೋರಿಸುತ್ತಾಳೆಂದು ವರ್ಣಿಸಿರುವುದನ್ನು ನೋಡಿದರೆ ಈ ಎಲ್ಲ ಕವಿಗಳಿಗೆ ಒಂದು ರೀತಿಯ ಕಾಮದ ಸನ್ನಿ ಹಿಡಿದಿದೆಯೇನೋ ಎಂದು ಅನಿಸದಿರಲಾರದು. ಪರಂಪರೆಯಲ್ಲಿ ಪಾರಾಯಣ ಮಾಡಿಕೊಂಡು ಬಂದ ಇಂತಹ ಧಾರ್ಮಿಕ ಗ್ರಂಥಗಳ ಓದುಗರು ಮತ್ತು ಕೇಳುಗರಿಗೆ ಶ್ರದ್ಧಾಭಕ್ತಿಯ ಆವೇಶದಲ್ಲಿ ಶಬ್ದ ಸೂತಕ ತಟ್ಟಲಿಲ್ಲವೇ?

21.4.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑